

“ಪ್ರೇಂ, ವೈ ಆರ್ ಯು ಕೀಪಿಂಗ್ ಮಮ್” ತರೇಸಳ ಧ್ವನಿ ಮತ್ತಷ್ಟು ಪೆಡಸಾಯಿತು.

“ಅಪ್ಪನಿಗೆ ಹುಷಾರಿಲ್ಲ...” ಪ್ರೇಮಚಂದ್ರ ಮೊಬೈಲನ್ನು ಕಿವಿಗೆ ಆದಷ್ಟು ಆತು ಹಿಡಿದು ಮೆದುವಾಗಿ ಹೇಳಿದ.

“ಏನಾಯಿತು?”

“ಮೈಲ್ಡ್ ಅಟ್ಯಾಕ್... ಇನ್ನು ಮೂರು ಗಂಟೆಗಳೊಳಗೆ ಮಂಗಳೂರನ್ನು ತಲುಪಬೇಕು. ಇಲ್ಲಾಂದ್ರೆ...”

“ಹೇಗೆ ಆಗದೇ ಇರುತ್ತೆ. ನಿಮ್ಮ ಅಪ್ಪ ಇರೋದೇ ಹಾಗಲ್ಲವೆ? ನಿದ್ರೆಯಲ್ಲಿ ಕೂಡ ಮಲಗಿದ್ದಲ್ಲೇ ಸುರುಸುರೂಂತ ಬೀಡಿ ಸೇದುತ್ತಾ ಇರ್ತಾರೆ. ಅಪ್ಪನನ್ನು ನಾವು ಎರ್ನಾಕುಳಂಗೆ ಕರೀಲಿಲ್ವಾ? ಬಂದ್ರಾ? ಅವರಿಗೆ ಆ ಕೆಸರು ನೀರೇ ಆಗಬೇಕು. ಬೀಡಿ ಸೇದದೇ ಇದ್ರೆ ನಿದ್ದೇನೇ ಬರೋಲ್ಲ. ಇಲ್ಲಿ ಸೇದಕ್ಕೆ ನಾವು ಬಿಡೋದಿಲ್ವಲ್ಲ. ಅಲ್ಲಿ ಲೋಕಲ್ಸ್‌ನ ಜೊತೆಗೇ ಅವರಿಗೆ ಬದುಕಬೇಕು. ಕೋಣದ ಜನ್ಮ... ಹತ್ತಿಪ್ಪತ್ತು ವರ್ಷ ಬದುಕಿದ್ದಲ್ವಾ... ಅದು ಸಾಲದೇನು?”

“ತರೇಸಾ, ನಾನು ಆಮೇಲೆ ಫೋನ್ ಮಾಡ್ತೀನಿ” ಪ್ರೇಮಚಂದ್ರ ಫೋನ್ ಕಟ್ ಮಾಡಲು ನೋಡಿದ.